# B

**CCE RR**
**UNREVISED**
**REDUCED SYLLABUS**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2023**

**S.S.L.C. EXAMINATION, MARCH / APRIL, 2023**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 12. 04. 2023 ] **ಸಂಕೇತ ಸಂಖ್ಯೆ : 62-K**

Date : 12. 04. 2023 ] **CODE NO. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **8 × 1 = 8** |
| 1. | ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳ ಸಂಖ್ಯೆ<br>(ಎ) ೧೩ (ಬಿ) ೨೫<br>(ಸಿ) ೯ (ಡಿ) ೪೯<br>***ಉತ್ತರ :*** (ಡಿ) ೪೯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | 'ಗೌರಿಯ ಮುಖ ಕಮಲದಂತೆ ಅರಳಿತು' ಈ ವಾಕ್ಯದಲ್ಲಿರುವ ಅಲಂಕಾರ<br>(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ<br>(ಸಿ) ದೃಷ್ಟಾಂತಾಲಂಕಾರ (ಡಿ) ಉತ್ಪ್ರೇಕ್ಷಾಲಂಕಾರ<br>***ಉತ್ತರ :*** (ಎ) ಉಪಮಾಲಂಕಾರ | |
| 3. | 'ಧರ್ಮ' ಈ ಪದದ ವಿರುದ್ಧಾರ್ಥಕ ರೂಪ<br>(ಎ) ದಮ್ಮ (ಬಿ) ಅಧರ್ಮ<br>(ಸಿ) ದರುಮ (ಡಿ) ಅದಮ್ಮ<br>***ಉತ್ತರ :*** (ಬಿ) ಅಧರ್ಮ | |
| 4. | ಹರ್ಷ, ಅಚ್ಚರಿ, ಸಂತಸ, ದುಃಖ, ಕೋಪ ಇತ್ಯಾದಿ ಭಾವನೆಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವ ಸಂದರ್ಭಗಳಲ್ಲಿ ಬಳಸುವ ಲೇಖನ ಚಿಹ್ನೆ<br>(ಎ) ಭಾವಸೂಚಕ (ಬಿ) ವಿವರಣಾತ್ಮಕ<br>(ಸಿ) ಪೂರ್ಣವಿರಾಮ (ಡಿ) ಅರ್ಧವಿರಾಮ<br>***ಉತ್ತರ :*** (ಎ) ಭಾವಸೂಚಕ | |
| 5. | ಮಕ್ಕಳು ಹಾಲನ್ನು ಕುಡಿಯುತ್ತಾರೆ ಮತ್ತು ಹಣ್ಣನ್ನೂ ತಿನ್ನುತ್ತಾರೆ. ಈ ವಾಕ್ಯವು<br>(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರವಾಕ್ಯ<br>(ಸಿ) ಸಂಯೋಜಿತ ವಾಕ್ಯ (ಡಿ) ಅಲಂಕಾರಿಕ ವಾಕ್ಯ<br>***ಉತ್ತರ :*** (ಸಿ) ಸಂಯೋಜಿತ ವಾಕ್ಯ | |
| 6. | ಕೆಳಗಿನವುಗಳಲ್ಲಿ ಸವರ್ಣದೀರ್ಘ ಸಂಧಿಗೆ ಉದಾಹರಣೆಯಾದ ಪದ<br>(ಎ) ಸುರೇಂದ್ರ (ಬಿ) ದೀಪಾಲಂಕಾರ<br>(ಸಿ) ಏಕೈಕ (ಡಿ) ಅತ್ಯಂತ<br>***ಉತ್ತರ :*** (ಬಿ) ದೀಪಾಲಂಕಾರ | |
| 7. | 'ಪ್ರಾಣಿ' – ಪದದ ಬಹುವಚನ ರೂಪ<br>(ಎ) ಪಕ್ಷಿ (ಬಿ) ಪಕ್ಷಿಗಳು<br>(ಸಿ) ಪ್ರಾಣಿಗಳು (ಡಿ) ಮೃಗ<br>***ಉತ್ತರ :*** (ಸಿ) ಪ್ರಾಣಿಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಕೆಳಗಿನವುಗಳಲ್ಲಿ ಅನುಕರಣಾವ್ಯಯಕ್ಕೆ ಉದಾಹರಣೆಯಾಗಿರುವ ಪದ<br>(ಎ) ಬೇಗಬೇಗ (ಬಿ) ಸರಸರ<br>(ಸಿ) ರೀತಿ–ನೀತಿ (ಡಿ) ಕೈಕೊಡು<br>**ಉತ್ತರ :** (ಬಿ) ಸರಸರ | |
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 9. | ಕೊಡಗಿನ ಗೌರಮ್ಮನವರ ತಂದೆಯ ಹೆಸರು : ಎನ್.ಎಸ್. ರಾಮಯ್ಯ ::<br>ಕೊಡಗಿನ ಗೌರಮ್ಮನವರ ತಾಯಿಯ ಹೆಸರು : ......................... .<br>**ಉತ್ತರ :** ನಂಜಕ್ಕ | |
| 10. | ಉಲ್ಲಾಳದ ರಾಣಿ : ಅಬ್ಬಕ್ಕದೇವಿ :: ಕೆಳದಿಯ ರಾಣಿ : .................... .<br>**ಉತ್ತರ :** ಚೆನ್ನಮ್ಮ | |
| 11. | ಕರದಲಿ : ಜಪಮಣಿ :: ಬಾಯಲಿ : ......................... .<br>**ಉತ್ತರ :** ಮಂತ್ರವು | |
| 12. | ಕಳಸ : ಹಿಂದೂ :: ಶಿಲುಬೆ : ......................... .<br>**ಉತ್ತರ :** ಕ್ರೈಸ್ತ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **4 × 1 = 4** |
| 13. | ಗೌರಮ್ಮನವರ ಪೂರ್ವಜರು ಯಾವ ಸೀಮೆಯವರು ?<br>**ಉತ್ತರ :**<br>ಗೌರಮ್ಮನವರ ಪೂರ್ವಜರು ವಿಟ್ಲ ಸೀಮೆಯವರು. | |
| 14. | ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು ಯಾವವು ?<br>**ಉತ್ತರ :**<br>ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು ಕಂದ, ವೃತ್ತ, ತ್ರಿಪದಿ, ವಚನ. | |
| 15. | ಶಿಲ್ಪಿ ಧರ್ಮಪದನು ಯಾವ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ಬಂದನು ?<br>**ಉತ್ತರ :**<br>ಶಿಲ್ಪಿ ಧರ್ಮಪದನು ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ಬಂದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 16. | ಧರ್ಮಪದನ ಇನ್ನೊಂದು ಹೆಸರೇನು ?<br>***ಉತ್ತರ :***<br>ಧರ್ಮಪದನ ಇನ್ನೊಂದು ಹೆಸರು ಮುಕುಂದ. | |
| **IV.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) :** | **8 × 2 = 16** |
| 17. | ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ?<br>***ಉತ್ತರ :***<br>ಮಿನಿಪೊಲೀಸ್ ನಗರದ ಟ್ರಾಫಿಕ್ ಪೊಲೀಸನು ಗೊರೂರರನ್ನು ತನ್ನ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ಗೊರೂರರಿಗೆ ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕತ್ತುಗಳನ್ನು ರಾತ್ರಿ ಊಟಕ್ಕೆ ನೀಡಿದನು. ಊಟವಾದ ನಂತರ ಗಾಳಿ ಬೆಳಕು ಬರುವ ಲಾಕಪ್ಪಿನಲ್ಲಿ ಸ್ವಚ್ಛವಾದ ಹಾಸಿಗೆ ನೀಡಿ ಮಲಗಲು ಹೇಳಿದನು. | |
| 18. | ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತುಹೋಗಿತ್ತು ?<br>***ಉತ್ತರ :***<br>ಶರೀಫರಿಗೆ ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತಗಳೆಂದರೆ ತುಂಬಾ ಪ್ರೀತಿ. ಅಭಿನಯದಲ್ಲಿ ತುಂಬಾ ಆಸಕ್ತಿಯಿದ್ದುದರಿಂದ ರಾಮಾಯಣ, ಮಹಾಭಾರತ, ಅಲ್ಲಮಪ್ರಭು ಬಯಲಾಟಗಳಲ್ಲಿ ಪಾತ್ರವಹಿಸಿ ಪ್ರೇಕ್ಷಕರ ಕಣ್ಮನಗಳನ್ನು ತಣಿಸುತ್ತಿದ್ದರು. ಜಾತ್ರೆ, ಉತ್ಸವ ಮೊದಲಾದವುಗಳಲ್ಲಿ ಅನುಭಾವ ಕವಿಗಳಾದ ಸರ್ವಜ್ಞ, ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯವಾಚನ ಮಾಡುತ್ತಿದ್ದರು. ಜನ್ಮ ಮುಸ್ಲಿಂ ಕುಟುಂಬದಲ್ಲಾದರೂ ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯ ಬೆರೆತುಹೋಗಿತ್ತು. | |
| 19. | ಗೋವಿಂದಭಟ್ಟರು ಯಾರು ? ಅವರ ಗುಣ ಸ್ವಭಾವಗಳನ್ನು ತಿಳಿಸಿ.<br>***ಉತ್ತರ :***<br>ಗುರು ಗೋವಿಂದ ಭಟ್ಟರು ಶರೀಫರ ಆದರ್ಶ ಗುರುಗಳು ಮತ್ತು ಕಳಸ ಗ್ರಾಮದವರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಗುರು ಗೋವಿಂದ ಭಟ್ಟರು ಜ್ಞಾನಿಗಳೂ, ವಿದ್ಯಾವಂತರೂ ಎಂದು ಖ್ಯಾತಿವೆತ್ತವರು ನಗೆಮುಖದ ಪ್ರಸಾದ ವಾಣಿಯ ದಿವ್ಯವ್ಯಕ್ತಿಗಳಾಗಿದ್ದರು. ಇವರು ಶಕ್ತಿಯ ಉಪಾಸಕರು, ಉದಾರ ಹೃದಯಿಗಳು ಆಗಿದ್ದರು. ಮಾನವ ಕುಲ ಒಂದೇ ಎಂಬ ಭಾವನೆಯುಳ್ಳವರಾಗಿದ್ದರು. ಜಾತಿ-ಮತಗಳ ಭೇದವೆಂದರೆ ಇವರಿಗಾಗದು. ಇವರು ಯಾವುದೇ ರೀತಿಯ ಭೇದ-ಭಾವಗಳಿಲ್ಲದೆ ಮುಕ್ತವಾಗಿ ವಿದ್ಯಾದಾನ ಮಾಡುತ್ತಿದ್ದರು. ಇವರು ತುಂಬಾ ಶಾಂತ ಮನಸ್ಸಿನ ಗುರುಗಳಾಗಿದ್ದರು. | |
| 20. | ತುಳಜಾಬಾಯಿಯ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ತುಳಜಾಬಾಯಿ ಮಗನನ್ನು ಬಲಿ ಕೊಡುವ ಸಾಧ್ಯತೆಯ ಅರಿವಿದ್ದರೂ ಧೈರ್ಯ ತಂದುಕೊಂಡಳು. ಒಂದು ವರ್ಷದ ಹಿಂದೆ ಈ ಹೋರಾಟದಲ್ಲಿ ತನ್ನ ಪತಿ ಗತಿಸಿದ್ದರೂ ಲೆಕ್ಕಿಸದೆ ತನ್ನ ಮಗನನ್ನು ಆಶೀರ್ವದಿಸಿ ಮೋಹನಪುರದ ಹೋರಾಟಕ್ಕೆ ಶುಭಕೋರಿ ಕಳುಹಿಸಿಕೊಟ್ಟಿದ್ದಾಳೆ. ಅಯ್ಯೋ ರಾಮಸಿಂಗ್ ನಿನ್ನ ಕೈಯಲ್ಲಿಯ ಧ್ವಜವನ್ನು ಕಸಿದುಕೊಂಡಿದ್ದಾರೆಯೇ ಇನ್ನೊಂದು ಧ್ವಜವನ್ನು ತಂದಿದ್ದೇನೆ. ತೆಗೆದುಕೊ ಎಂದು ನುಡಿದಳು. ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೇ ಬಲಿಕೊಟ್ಟಿರುವೆ. ನನ್ನ ಪ್ರಾಣವನ್ನು ತ್ಯಜಿಸಲು ಸಿದ್ಧಳಿದ್ದೇನೆ. ನಾನು ಈ ಧ್ವಜವನ್ನು ಕೆಳಗೆ ಇಡಲಾರೆನೆಂದು ಹೇಳುತ್ತ ಭಾರತ ಮಾತೆಗೆ ಜಯವಾಗಲಿ ಎಂದು ಧ್ವಜವನ್ನು ಎತ್ತಿ ಹಿಡಿದಳು. | |
| 21. | ಶೋಷಣೆಯನ್ನು ವಿರೋಧಿಸುವವರು ಪಡಬೇಕಾದ ಕಷ್ಟ 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ?<br>***ಉತ್ತರ :***<br>ಶೋಷಣೆಯನ್ನು ವಿರೋಧಿಸುವವರು ಕ್ರಾಂತಿಯೆಂಬ ಕೆಂಡದಂತೆ ಸುಡುವ ಕುಂಡವನ್ನು ಹೊರಬೇಕು. ನಡೆಯುವಾಗ ದಾರಿಯ ತುಂಬ ಮುಳ್ಳುಗಳು ಚುಚ್ಚುತ್ತಿರುತ್ತವೆ. ಪರಿಣಾಮವಾಗಿ ಕಾಲುಗಳಿಂದ ರಕ್ತ ಚಿಮ್ಮುತ್ತಿದ್ದರೂ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಇತರರನ್ನು ಬಡಿದೆಬ್ಬಿಸಲು ಹಾಡನ್ನು ಬರೆಯುತ್ತಾರೆ ಎಂದು 'ಕಟ್ಟತೇವ ನಾವು' ಕವಿತೆಯಲ್ಲಿ ಶೋಷಣೆಯನ್ನು ವಿರೋಧಿಸುವವರ ಕಷ್ಟವು ವ್ಯಕ್ತವಾಗಿದೆ. | |
| 22. | ಆಂಗ್ಲರು ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೆ ಎಂದು ನಿಸಾರ್ ಅಹಮದ್ ಅವರು ಹೇಳಿರುವುದರ ಔಚಿತ್ಯವೇನು ? | |
| | ***ಉತ್ತರ :*** | |
| | ಪಂಚಭೂತಗಳಾದ ಭೂಮಿ, ಆಕಾಶ, ಅಗ್ನಿ, ಜಲ, ಗಾಳಿ ಎಲ್ಲರಿಗೂ ಒಂದೇ ಆಗಿದೆ. 'ಮಾನವ ಜಾತಿ ತಾನೊಂದೆ ವಲಂ' ಎಂಬುದು ಕವಿ ವಾಣಿ. ಧರ್ಮ, ಭಾಷೆ, ಉಡುಗೆ-ತೊಡುಗೆ ಆಹಾರ ಪದ್ಧತಿಗಳು ಬೇರೆಬೇರೆ ಆಗಿದ್ದರೂ ನಾವೆಲ್ಲರೂ ಒಂದೆ. ಆಂಗ್ಲರು ಆಫ್ರಿಕನ್ನರು ಬೇರೆಬೇರೆಯಾಗಿದ್ದರೂ ಸಹಿತ ನಮ್ಮಲ್ಲಿ ಅವರಲ್ಲಿ ಹರಿಯುವ ರಕ್ತ ಒಂದೆ ಆಗಿದೆ. ಅಕ್ಕಿ ಬಿಳಿದು, ರಾಗಿ ಕರಿಯ ಬಣ್ಣದಾಗಿದ್ದರೂ ಅವುಗಳ ಹುಲ್ಲಿನ ಬಣ್ಣ ಒಂದೇ ಆಗಿದೆಯೆಂದು ನಿಸಾರ್ ಅಹಮದ್‌ರವರು ಹೇಳಿದ್ದಾರೆ. | |
| 23. | ಸತೀಶ ಕುಲಕರ್ಣಿಯವರು ಎಂತಹ ನಾಡನ್ನು ಕಟ್ಟುತ್ತೇವೆಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ ? | |
| | ***ಉತ್ತರ :*** | |
| | ಸತೀಶ ಕುಲಕರ್ಣಿಯವರು ಅಸಮಾನತೆ ಇಲ್ಲದ, ಜಾತಿ, ಮತ, ಭೇದಗಳಿಲ್ಲದ ಸಮಾಜವನ್ನು ನಿರ್ಮಾಣ ಮಾಡುತ್ತೇವೆ. ಸಮಾಜದಲ್ಲಿರುವ ಶೋಷಣೆ, ದೌರ್ಜನ್ಯಗಳನ್ನು ಹೋಗಲಾಡಿಸುತ್ತೇವೆ. ಜಾತಿ-ಭೀತಿ ಇಲ್ಲದೆ ಬಾಳನ್ನು ಕಟ್ಟುತೇವೆ. ಕುಲವೆನ್ನದ ಮನುಕುಲವನ್ನು ಕಟ್ಟುತ್ತೇವೆ. ಗೋಳಿಲ್ಲದ ಗುಂಡಿಲ್ಲದ ನಾಡನ್ನು ಕಟ್ಟುತ್ತೇವೆ. ನೂರು ಮನಸ್ಸಿನ ಭಾವನೆಗಳನ್ನು ಒಂದುಗೂಡಿಸಿ ಕೋಟಿ ಕನಸಿನ ಹಾಡನ್ನು ಕಟ್ಟುತ್ತೇವೆ. ಎಲ್ಲರೂ ಒಂದಾಗಿ ಹೊಂದಿಕೊಂಡು ಹೋಗುವ ನಾಡನ್ನು ನಾವು ನಿರ್ಮಿಸುತ್ತೇವೆ ಎಂದು ಹೇಳಿದ್ದಾರೆ. | |
| 24. | ಧರ್ಮಪದನಿಗೆ ವಿಷ ಉಣಿಸಲು ಪ್ರಯತ್ನಿಸಿದ್ದೇಕೆ ? | |
| | ***ಉತ್ತರ :*** | |
| | ಶಿಲ್ಪಿ ಧರ್ಮಪದನು ಕೋನಾರ್ಕ ದೇವಾಲಯಕ್ಕೆ ಕಲಶ ಕೂಡಿಸಿದ್ದನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನೋಡಿ ಅನೇಕ ಶಿಲ್ಪಿಗಳು ಅವನ ಮೇಲೆ ಕಣ್ಣಿಟ್ಟಿದ್ದರು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಎಂಥಾ ಪ್ರತಿಭೆ ಇವನಿಗೆ! ಅವನನ್ನು ಬೆಳೆಯಲು ಬಿಡಬಾರದು ತಮ್ಮ ಸಾಧನೆ ಅವನ ಪ್ರತಿಭೆಯ ಮುಂದೆ ಸಣ್ಣದಾಗುವುದು ಬೇಡ. ಈಗಲೇ ಅವನನ್ನು ಮುಗಿಸಿ ಬಿಡಬೇಕು. ಇದು ತಕ್ಕಸಮಯ. ಯಾರೋ ಒಬ್ಬ ದೂರ್ತ ಆಲೋಚಿಸಿ ಮನೆಯಿಂದ ತಂದಿದ್ದ ಬುತ್ತಿಗೆ ವಿಷ ಬೆರೆಸಲು ಪ್ರಯತ್ನಿಸಿದನು. | |
| **V.** | **ಸಂದರ್ಭಸಹಿತ ವಿವರಣೆ :** | **2 × 3 = 6** |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು-ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ದೇವಿ ನನ್ನ ಅಪರಾಧವನ್ನು ಕ್ಷಮಿಸು."<br>***ಉತ್ತರ :***<br>ಈ ಮಾತನ್ನು ವಿಜಯಲಕ್ಷ್ಮಿ ಬಾಳೇಕುಂದ್ರಿಯವರು ಬರೆದ 'ಜೀವನಧಾರೆ' ಎಂಬ ಕೃತಿಯಿಂದ ಆಯ್ದ 'ಕರ್ನಾಟಕದ ವೀರ ವನಿತೆಯರು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಶಿವಾಜಿ ಮಹಾರಾಜರು ಬೆಳವಡಿ ಮಲ್ಲಮ್ಮಾಜಿಗೆ ನುಡಿದರು.<br>ಎಂಟು-ಹತ್ತು ಸರದಾರರೊಂದಿಗೆ ಜಗದಾಂಬೆಯ ದರ್ಶನ ಪಡೆದು ಮರಳುತ್ತಿದ್ದ ಶಿವಾಜಿಯ ಮೇಲೆ ಮಿಂಚಿನಂತೆ ಎರಗಿ ಖಡ್ಗದ ಹೊಡೆತದಿಂದ ಅವರನ್ನೆಲ್ಲ ಮಲ್ಲಮ್ಮಾಜಿ ನೆಲಕ್ಕೆ ಉರುಳಿಸಿದಳು. ಹಠಾತ್ತನೆ ದಾಳಿ ಮಾಡಿದ ರಾಣಿಯನ್ನು ಕಂಡ ಶಿವಾಜಿ ತಲ್ಲಣಗೊಂಡನು. ಶಿವಾಜಿಯು ಕುದುರೆಯಿಂದ ಕೆಳಗೆ ಇಳಿದು ಕೈಜೋಡಿಸಿ "ದೇವಿ ನನ್ನ ಅಪರಾಧವನ್ನು ಕ್ಷಮಿಸಿ" ಎಂದು ಕೇಳಿಕೊಂಡನು.<br>ಶಿವಾಜಿಯ ವಿನಮ್ರತಾ ಗುಣವನ್ನು ನಾವಿಲ್ಲಿ ಕಾಣಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 26. | "ಆಚಾರವೇ ಸ್ವರ್ಗ! ಅನಾಚಾರವೇ ನರಕ." | |
| | ***ಉತ್ತರ :*** | |
| | ಈ ವಾಕ್ಯವನ್ನು ಡಾ. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿದ 'ಬಸವಣ್ಣನ ವಚನಗಳು' ಎಂಬ ಕೃತಿಯಿಂದ ಆಯ್ದ 'ಬಸವಣ್ಣನವರ ವಚನಗಳು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ. | |
| | ಬಸವಣ್ಣನವರು ಸ್ವರ್ಗ-ನರಕಗಳ ಕಲ್ಪನೆಯನ್ನು ಸ್ಪಷ್ಟಪಡಿಸುವಾಗ ಈ ಮಾತನ್ನು ಹೇಳಿದ್ದಾರೆ. | |
| | ದೇವಲೋಕ, ಇಹಲೋಕ ಇವೆರಡೂ ಬೇರೆಬೇರೆ ಇಲ್ಲ. ಸತ್ಯವ ನುಡಿವುದೇ ದೇವಲೋಕವಾಗಿದೆ. ಸುಳ್ಳನ್ನು ನುಡಿಯುವುದು. ಇಹಲೋಕವಾಗಿದೆ. ಅದೇ ರೀತಿಯಾಗಿ ಒಳ್ಳೆಯ ನಡವಳಿಕೆಯಿಂದ ಸ್ವರ್ಗ ಕೆಟ್ಟ ನಡವಳಿಕೆಯಿಂದ ನರಕ ಸಿಗುತ್ತದೆಂದಿದ್ದಾರೆ. | |
| | ಬಸವಣ್ಣನವರು ಮನುಷ್ಯ ಪರಿಶುದ್ಧ ಮನಸ್ಸಿನಿಂದ ದೈವಕೃಪೆಗೆ ಪಾತ್ರರಾಗುವ ಮಾರ್ಗವನ್ನು ಇಲ್ಲಿ ಹೇಳಿದ್ದಾರೆ. | |
| **VI.** | **ಐದು-ಆರು ವಾಕ್ಯಗಳಲ್ಲಿ ಉತ್ತರಿಸುವುದು :** | **4 × 3 = 12** |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ಮಿನಿಪೊಲೀಸ್ ನಗರದಲ್ಲಿ ಗೊರೂರರು ತಪ್ಪಿಸಿಕೊಂಡ ಪ್ರಕರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | ***ಉತ್ತರ :*** | |
| | ಅಮೆರಿಕಾದ ಮಿನಿಪೊಲೀಸ್ ನಗರಕ್ಕೆ ಗೊರೂರರು ತಮ್ಮ ಮಿತ್ರನನ್ನು ನೋಡಲು ಹೋಗಿದ್ದರು. ಮಿತ್ರನು ಅಲ್ಲಿರಲಿಲ್ಲ. ದಾರಿಯಲ್ಲಿ ಅವರ ಪರಿಚಿತರೊಬ್ಬರು ಸಿಕ್ಕಿದ್ದರು. ಅವರನ್ನು ಮೋಟಾರಿನಲ್ಲಿ ಕೂರಿಸಿಕೊಂಡು ಹೋದರು. ಗೊರೂರರು ದಾರಿಯಲ್ಲಿ ಒಂದೆಡೆ ಕಾರಿನಿಂದ ಇಳಿದು ಅದೇ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ದಾರಿಯಲ್ಲಿ ಹಿಂದಿರುಗುವಾಗ ರಾತ್ರಿ 2 ಗಂಟೆಗೆ ತನ್ನನ್ನು ಕರೆದುಕೊಂಡು ಹೋಗಲು ಹೇಳಿದ್ದರು. ದೀಪ ಹೊತ್ತಿದ ಮೇಲೆ ನಗರದಲ್ಲಿ ಅಲ್ಲಲ್ಲಿ ಸುತ್ತುತ್ತ ಅವರಿಗೆ ಅರಿವಿಲ್ಲದಂತೆ ಬಣ್ಣದ ಬಲ್ಬುಗಳು, ಕಮಾನುಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರ ನೋಡುತ್ತ ಪರಿಚಿತರು ಕರೆದುಕೊಂಡು ಹೋಗಲು ಗೊತ್ತು ಮಾಡಿದ್ದ ಸ್ಥಳವನ್ನು ಬಿಟ್ಟು ಆಚೆ-ಈಚೆ ಹೊರಟು ಹೋದರು. ಆ ನಂತರ ಏನೂ ಮಾಡಿದರೂ ಆ ಸ್ಥಳ ಸಿಗಲಿಲ್ಲ. ಹೀಗಾಗಿ ಗೊರೂರರು ತಪ್ಪಿಸಿಕೊಂಡರು. | |
| 28. | ಕುಲಕರ್ಣಿ ಅವರಿಗೂ ರಾಮಸಿಂಗನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.<br>***ಉತ್ತರ :***<br>ಕುಲಕರ್ಣಿ ಮತ್ತು ರಾಮಸಿಂಗ ಇವರಿಬ್ಬರ ಸಂಭಾಷಣೆ ತುಂಬಾ ಸ್ವಾರಸ್ಯಕರವಾಗಿದೆ. ರಾಮಸಿಂಗನು ಕುಲಕರ್ಣಿಗೆ ಇಂತಹ ಕವಡಿ ಕಿಮ್ಮತ್ತಿನ ಗುಲಾಮರಿಗೆ ಮುಂದಾಳುಗಳೇಕೆ ? ನನ್ನಂತಹ ದೇಶಾಭಿಮಾನಿ ಹುಡುಗನೊಬ್ಬನು ಇದ್ದರೆ ಸಾಕು ಎಂದು ನುಡಿದಾಗ, ಕುಲಕರ್ಣಿ ಮುಚ್ಚು ಬಾಯಿ ಎಂದರು. ಅದಕ್ಕೆ ಪ್ರತಿಯಾಗಿ ಬಾಯಿ ಬಿಚ್ಚೆಂದಾಗ ಬಿಚ್ಚಲು, ಮುಚ್ಚೆಂದಾಗ ಮುಚ್ಚಲು ಈ ಬಾಯಿ ನಿಮ್ಮಂತಹ ಗುಲಾಮರ ಬಾಯಿಯಲ್ಲ. ಆಗ ಸತ್ಯಾಗ್ರಹಗಳು, ಘೋಷಣೆ ಹಾಕಿದರು. ಅದಕ್ಕೆ ಕುಲಕರ್ಣಿ ಸುಮ್ಮನೆ ಇಲ್ಲಿಂದ ಹೊರಟು ಹೋಗಿರಿ ಎಂದು ನುಡಿದರು. ನನ್ನ ಸಿಟ್ಟು ನೆತ್ತಿಗೇರುತ್ತದೆ ಎಂದು ನುಡಿದಾಗ ರಾಮಸಿಂಗನು ಅದನ್ನು ಇಳಿಸುವ ಮಾಂತ್ರಿಕರು ನಮ್ಮಲ್ಲಿದ್ದಾರೆ ಎನ್ನುತ್ತಾನೆ. ಕುಲಕರ್ಣಿ ನನ್ನ ಕೈಯಲ್ಲಿ ಏನಿದೆ ನೋಡಿದಿಯಾ ? ಎಂದು ಪಿಸ್ತೂಲು ತೋರಿಸಿದಾಗ ಅದಕ್ಕೆ ಪ್ರತಿಯಾಗಿ ನನ್ನ ಕೈಯಲ್ಲಿ ಏನಿದೆ ನೋಡಿದ್ದೀರಾ ? ರಾಮಸಿಂಗನು ರಾಷ್ಟ್ರಧ್ವಜವನ್ನು ತೋರಿಸುವನು. ಕುಲಕರ್ಣಿಯು ಪಿಸ್ತೂಲಿನ ಶಕ್ತಿಯ ಮುಂದೆ ನಿಲ್ಲುವೆಯಾ ಎಂದಾಗ ರಾಮಸಿಂಗ ಧ್ವಜದ ಶಕ್ತಿಯ ಮುಂದೆ ನಿಲ್ಲಬಲ್ಲಿರಾ ? ಕುಲಕರ್ಣಿ ರಾಮಸಿಂಗನಿಗೆ ಸುಮ್ಮನೆ ಧ್ವಜವನ್ನು ಕೆಳಗಿಡು ಎನ್ನುತ್ತಾನೆ. ರಾಮಸಿಂಗನು ದೇಹದಲ್ಲಿ ಪ್ರಾಣ ಇರುವವರೆಗೆ ಧ್ವಜವನ್ನು ಕೆಳಗಿಡಲಾರೆ. 'ಮಾಡು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಇಲ್ಲವೇ ಮಡಿ' ಇದು ಗಾಂಧೀಜಿ ಹೇಳಿಕೊಟ್ಟ ಮಂತ್ರ ಎಂದು ಹೇಳುತ್ತ ಮುನ್ನುಗ್ಗುತ್ತಾನೆ. ಕುಲಕರ್ಣಿ ಗಾಳಿಯಲ್ಲಿ ಗುಂಡು ಹಾರಿಸಿ ಚದುರಿರಿ ಇಲ್ಲಿಂದ ಎಂದು ಹೇಳುತ್ತಾನೆ. ರಾಮಸಿಂಗನು ಶಕ್ಯವಿಲ್ಲವೆಂದು ಮುನ್ನುಗ್ಗುವನು. | |
| 29. | ತನ್ನ ಪ್ರಾರ್ಥನೆಗೆ ಫಲ ಸಿಗುತ್ತದೆಂದು ತಿಳಿದ ರೈತರ ಸಂಭ್ರಮವನ್ನು ಹೇಗೆ ಮೆಚ್ಚಿಕೊಳ್ಳುವಿರಿ ? ವಿವರಿಸಿ. | |
| | ***ಉತ್ತರ :*** | |
| | ರೈತರಿಗೆ ಬೇಸಾಯವೇ ಪ್ರಧಾನ ವೃತ್ತಿ. ಮಳೆ ಭೂಮಿಗೆ ಬೀಳದಿದ್ದರೆ ಅವರ ಬದುಕೇ ಶೂನ್ಯ. ಇಂಥ ಸ್ಥಿತಿಯಲ್ಲಿ ಮಳೆರಾಯನನ್ನು ಕರೆಯುತ್ತಿರುವ ಸನ್ನಿವೇಶ ಸುಂದರವಾಗಿ ವರ್ಣಿತವಾಗಿದೆ. ಮಳೆ ಬಾರದೆ ಭೂಮಿ ಬರಡಾಗಿದೆ. ದನ-ಕರುಗಳು ಸಪ್ಪೆದಂಟಿನಂತಾಗಿವೆ. ಮಳೆರಾಯನೇ ನಮ್ಮ ಮೇಲೆ ಕರುಣೆ ತೋರಿ ರಕ್ಷಿಸು ಎಂದು ಪ್ರಾರ್ಥಿಸುತ್ತಾರೆ. ಮುಗಿಲಲ್ಲಿ ಮಳೆ ಬರುವ ಸೂಚಕವಾಗಿ ಕಾರ್ಮೋಡಗಳು ತುಂಬಿಕೊಂಡು ಗೋಡೆಗೆ ಕಪ್ಪುಬಳಿದ ಹಾಗೆ ಕಾಣುತ್ತಿವೆ ಎಂದು ಜನರನ್ನು ಕರೆಕರೆದು ತೋರಿಸುವ ಪರಿ ಸೊಗಸಾಗಿದೆ. ಇನ್ನೇನು ಮಳೆಬಂದು ಸುರಿಯುತ್ತದೆ ಎಂದು, ಪೂರ್ವದಿಕ್ಕಿನಲ್ಲಿರುವ ಮುತ್ತಿನ ಸೋನೆ ಮಳೆಯೇ, 'ಭೈರವನಿರುವ ಬೆಟ್ಟದ ಮೇಲೆ ಜಗ್ಗಿಸಿ ಮಳೆಯನ್ನು ಸುರಿಸು' ಎನ್ನುತ್ತಾನೆ. ಈ ರೀತಿ ರೈತನು ತನ್ನ ನಿರೀಕ್ಷೆ ಈಡೇರಿದ ಸಂತಸದಲ್ಲಿದ್ದಾನೆ ಎಂದು ಜನಪದರು ವರ್ಣಿಸಿದ್ದಾರೆ. | |
| 30. | ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಹೇಗೆ ಚಿತ್ರಿತವಾಗಿದೆ ? | |
| | ***ಉತ್ತರ :*** | |
| | ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಸುಂದರವಾಗಿ ಚಿತ್ರಿತವಾಗಿದೆ. ಡಾಂಭಿಕ ಭಕ್ತನು ಉದಯಕಾಲದಲ್ಲಿ ಎದ್ದು ನದಿಯಲ್ಲಿ ಸ್ನಾನ ಮಾಡಿ ಗಡಗಡ ನಡುಗುತ್ತ, ಮದ-ಮತ್ಸರ, ಕಾಮ-ಕ್ರೋಧಗಳನ್ನು ಮನಸ್ಸಿನಲ್ಲಿ ತುಂಬಿಕೊಂಡು ದೇವರಲ್ಲಿ ಸ್ವಲ್ಪವೂ ಭಕುತಿಯಿಲ್ಲದೆ ಬರೀ ನಟನೆಯನ್ನು ಮಾಡುತ್ತಾನೆ. ಕೈಯಲ್ಲಿ ಜಪಮಣಿಯನ್ನು ಹಿಡಿದು, ಬಾಯಿಂದ ಮಂತ್ರಪಠಿಸುತ್ತ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಅರಿವೆಯ ಮುಸುಕನ್ನು ಮುಖಕ್ಕೆ ಹಾಕಿಕೊಂಡು ಪರಸತಿಯರನ್ನು ಮನದಲ್ಲಿ ನೆನೆಯುತ್ತ ಪರಮ ವೈರಾಗ್ಯಶಾಲಿ ಎಂದೆನಿಸಿಕೊಳ್ಳುತ್ತಿದ್ದಾನೆ. ಕಂಚುಗಾರನ ಬಿಡಾರದ ಹಾಗೆ ಕಂಚು ಹಿತ್ತಾಳೆಯ ಪ್ರತಿಮೆಯನ್ನು ಜೋಡಿಸಿಕೊಂಡು ಅದು ಮಿಂಚಲೆಂದು ದೀಪಗಳನ್ನು ಹಚ್ಚಿ ವಂಚನೆಯಲಿ ಪೂಜೆ ಮಾಡುತ್ತಾನೆ. ತನಗಿಂತ ಹೆಚ್ಚಿನವರು ಯಾರೂ ಇಲ್ಲವೆಂಬಂತೆ ನಟಿಸುತ್ತ ನಾಟಕ ಸ್ತ್ರೀಯಂತೆ ಬಯಲ ಡಂಭವ ತೋರುತ್ತಾನೆ. | |
| **VII.** | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | *ಗೊರೂರು ರಾಮಸ್ವಾಮಿ ಅಯ್ಯಂಗಾರ್ :*<br>***ಉತ್ತರ :***<br>ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ೧೯೦೪ ನೇ ಜುಲೈ ೪ ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಇವರು 'ನಮ್ಮ ಊರಿನ ರಸಿಕರು', 'ಗರುಡಗಂಬದ ದಾಸಯ್ಯ', 'ಹೇಮಾವತಿ', 'ಮೆರವಣಿಗೆ', 'ಅಮೆರಿಕಾದಲ್ಲಿ ಗೊರೂರು', 'ಭೂತಯ್ಯನ ಮಗ ಅಯ್ಯು', 'ಹಳ್ಳಿಯ ಹಾಡು' ಎಂಬ ಕೃತಿಗಳನ್ನು ರಚಿಸಿದ್ದಾರೆ. | |
| 32. | *ಸತೀಶ ಕುಲಕರ್ಣಿ :*<br>***ಉತ್ತರ :***<br>ಸತೀಶ ಕುಲಕರ್ಣಿಯವರು ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಗುಡಗೇರಿಯಲ್ಲಿ ೧೩. ೦೭. ೧೯೫೧ ರಂದು ಜನಿಸಿದರು. ಇವರು 'ಬೆಂಕಿ ಬೇರು', 'ನೆಲದ ನೆರಳು', 'ವಿಕ್ಷಿಪ್ತ', 'ಒಡಲಾಳ ಕಿಚ್ಚು', 'ವಿಷಾದಯೋಗ', 'ಛಿನ್ನ', 'ಗಾಂಧೀಗಿಡ', 'ಕಂಪನಿ ಸವಾಲ್', 'ಸಮುದ್ರ ಸೂರ್ಯ' ಮತ್ತು 'ಗುರುವರ್ಯ ಗೋಕಾಕರು', 'ಒದೊಳಗಿನ ಒದು' ಎಂಬ ಕೃತಿಗಳನ್ನು ರಚಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **VIII.** | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| 33. | "ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ." | |
| | **ಅಥವಾ** | |
| | "ದೇಶ ಸುತ್ತು ಕೋಶ ಓದು." | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| **IX.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 34. | ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ವಿವರಿಸಿ.<br>**ಅಥವಾ**<br>'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ನಿಮ್ಮ ಮಾತುಗಳಲ್ಲಿ ಸಮರ್ಥಿಸಿ.<br>***ಉತ್ತರ :***<br>ಗಾಂಧೀಜಿಯವರು ೧೯೩೩ ನೇ ವರ್ಷದ ಕೊನೆಯಲ್ಲಿ ಕರ್ನಾಟಕ ಪ್ರವಾಸ ಕೈಗೊಂಡು ಕೊಡಗಿನಲ್ಲಿ ಎರಡು ದಿನಗಳ ಕಾಲ ತಂಗಿದ್ದರು. ಗಾಂಧೀಜಿಯವರ ಪರಮ ಅನುಯಾಯಿಯಾಗಿದ್ದ ಗೌರಮ್ಮ ತನ್ನ ೨೧ನೇ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿದರು. ಗಾಂಧೀಜಿಯವರು ತಮ್ಮಂತಹ ಸಾಧಾರಣ ಕುಟುಂಬದವರ ಮನೆಗೂ ಬರಬೇಕೆಂದು ಹಠವನ್ನು ಹಿಡಿದಿದ್ದರು. ಅದನ್ನು ಗಾಂಧೀಜಿಯವರು ಸಾಕಾರಗೊಳಿಸಿದರು. ಗಾಂಧೀಜಿಯವರು ಗೌರಮ್ಮನವರ ಮನೆಗೆ ತೆರಳಿ ಕೊಡಗಿನ ಕಿತ್ತಳೆ ಹಣ್ಣು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನೀಡಿ ಎಳೆ ಚೆಲುವೆಯ ಉಪವಾಸವನ್ನು ಅಂತ್ಯಗೊಳಿಸಿದರು. ಗಾಂಧೀಜಿಯವರು ಮನೆಗೆ ಬಂದಾಗ ಗೌರಮ್ಮನವರು ಸ್ವಾತಂತ್ರ್ಯ ಸಂಗ್ರಾಮ, ಹರಿಜನೋದ್ಧಾರ ಸಂಬಂಧ ನಿಧಿಗೆ ತನ್ನ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ, ಮೂಗು ಬೊಟ್ಟನ್ನು ಬಿಟ್ಟು ಉಳಿದೆಲ್ಲಾ ಒಡವೆಗಳನ್ನು ಮಹಾತ್ಮರ ಕೈಗೆ ಕೊಟ್ಟರು. | |
| | **ಅಥವಾ** | |
| | ಗೌರಮ್ಮ ಸುತ್ತಮುತ್ತಲಿನ ಬದುಕಿನಲ್ಲಿ ಕಂಡು ಕೇಳಿದ ಘಟನೆಗಳು ಮತ್ತು ಅವುಗಳ ಅನುಭವದ ಹಿನ್ನೆಲೆಯಲ್ಲಿ ಮಹಿಳಾಲೋಕದ ಕನಸುಗಳ ಆದರ್ಶಚಿತ್ರವನ್ನು ತಮ್ಮ ಕಥೆಗಳಲ್ಲಿ ನೀಡಲು ಪ್ರಯತ್ನಿಸಿದರು. ಗೌರಮ್ಮನವರ ೨೧ ಕಥೆಗಳಲ್ಲಿಯೂ ಎಲ್ಲಾ ಮಾನವ ಜೀವಿಗಳ ಸ್ವಾತಂತ್ರ್ಯ ಸದಭಿರುಚಿ ಹಾಗೂ ಮನದಾಳದ ಅನಿಸಿಕೆಗಳಿಗೆ ಪೂರಕವಾಗಿ ನಿಲ್ಲಬಲ್ಲರು. ಗೌರಮ್ಮನವರು ಆರೋಗ್ಯಕರ ನಿಲುವಿನ, ಜಾತ್ಯಾತೀತ ಮನೋಧರ್ಮದ, ಮಾನವೀಯ ವಿಚಾರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು. ಅಪಾರ ಜೀವನ ಪ್ರೀತಿಯ ಕತೆಗಾರ್ತಿ ಆಗಿದ್ದರು. ಭಾರತೀಯ ಸಮಾಜದಲ್ಲಿ ಮಹಿಳೆಯರು ತಮ್ಮದೇ ಆದ ಸಂಕೋಲೆಗಳು ಮತ್ತು ನಿಸ್ಸಹಾಯಕತೆಯ ಇಕ್ಕಟ್ಟಿನಲ್ಲಿ ನರಳುತ್ತಿರುವ ರೀತಿಯನ್ನು ಗ್ರಹಿಸಿದರು. ಸಮಾಜದಲ್ಲಿನ ಕ್ರೌರ್ಯದ ನಾನಾ ಮುಖಗಳ ಸೂಕ್ಷ್ಮವಾದ ಅನಾವರಣವನ್ನು ತಮ್ಮ ಕಥೆಗಳಲ್ಲಿ ಮಾಡಿದರು. ಬದುಕಿನ ಬಗ್ಗೆ ಕಾಳಜಿಯನ್ನು ಹೊಂದಿದ್ದ ಗೌರಮ್ಮ ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು. | |
| **X.** | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | **1 × 4 = 4** |
| 35. | ಅಪ್ಪರಿಲ್ಲದೆ ...................................................<br>...................................................................<br>..................................................... ಕರುಣೇಸೊ | |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮೂಡಮೋಡ ..................................................<br>.................................................................<br>..................................................... ಮುಗಿಲಲ್ಲಿ<br>***ಉತ್ತರ :***<br>ಅಪ್ಪರಿಲ್ಲದೆ ಸೊಪ್ಪಾದೊ ಈ ಭೂಮಿ<br>ಸಪ್ಪೆ ದಂಟಾದೊ ದನಕರ – ಮಳೆರಾಯ<br>ಅಪ್ಪ ನೀ ಬಂದು ಕರುಣೀಸೊ<br>**ಅಥವಾ**<br>ಮೂಡಮೋಡ ನೋಡೋ ಮೋಡದ ಚಂದನೋಡೋ<br>ಗೋಡೆಗೆ ಕಪ್ಪ ಬಳಿದ್ಹಂಗೆ – ಮಳೆರಾಯ<br>ಬೋರಾಡು ತಾವೆ ಮುಗಿಲಲ್ಲಿ | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | **1 × 4 = 4** |
| 36. | ಮಂದಾಕಿನೀ ಮತ್ತು ಸೋನಗಂಗಾ ಎಂಬ ನದಿಗಳ ಸಂಗಮದಲ್ಲಿ ಸೋನ ಪ್ರಯಾಗ ಎಂಬ ಪುಟ್ಟ ಊರು ಇದೆ. ಇಲ್ಲಿಂದ ಗೌರಿಕುಂಡ ಎಂಬ ಹಳ್ಳಿಗೆ ಹೋಗಿ ಅಲ್ಲಿಂದ ಕೇದಾರ ಪರ್ವತ ಹತ್ತಬೇಕು. ಗೌರಿ ಕುಂಡಕ್ಕೆ 'ಗೋಕುಂಡ' ಎಂಬ ಇನ್ನೊಂದು ಹೆಸರು ಇದೆ. ಕೇದಾರ ಪರ್ವತದ ತಪ್ಪಲಲ್ಲಿ 'ಗೋಮುಖ'ದಿಂದ ಸತತವಾಗಿ ಹಬೆಯಾಡುವ ಬಿಸಿನೀರು ಹರಿದು ಬಂದು ಕುಂಡದಲ್ಲಿ ಬೀಳುವುದು ಇಲ್ಲಿಯ ವಿಶೇಷತೆ. ಈ ಸ್ಥಳದಲ್ಲಿಯೇ ಪಾರ್ವತಿ ಶಿವನನ್ನು ಪತಿಯಾಗಿ ಪಡೆಯಲು ತಪಸ್ಸು ಮಾಡಿದ್ದಳಂತೆ.<br>ಗೌರಿಕುಂಡದಿಂದ ಕೇದಾರ ಹದಿನೈದು ಕಿಲೋಮೀಟರ್‌ಗಳ ದಾರಿ. ಕೇದಾರ ಪರ್ವತ ಶ್ರೇಣಿಗಳನ್ನು 'ರುದ್ರಹಿಮಾಲಯ' ಎಂದು ಕರೆಯುತ್ತಾರೆ. ಕೇದಾರ ದೇವಾಲಯ ಬಹುಸುಂದರವಾಗಿದೆ. ಪುರಾಣಗಳ ಪ್ರಕಾರ ವೇದವ್ಯಾಸ ಮಹರ್ಷಿಗಳ ಉಪದೇಶದಂತೆ ಪಾಂಡವರು ಇಲ್ಲಿ ತಪಸ್ಸು ಮಾಡಿ ಈ ದೇವಸ್ಥಾನವನ್ನು ಕಟ್ಟಿದರು. ಹಾಗಾಗಿ ದೇವಸ್ಥಾನದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಒಳಗೋಡೆಗಳಲ್ಲಿ ಪಾಂಡವರ ವಿಗ್ರಹಗಳನ್ನು ಅಳವಡಿಸಿದ್ದಾರೆ. ಗರ್ಭಗುಡಿಯ ಒಳಗೆ ಕೇದಾರೇಶ್ವರ. ಅದು ಲಿಂಗವೂ ಅಲ್ಲ, ಮೂರ್ತಿಯೂ ಅಲ್ಲ. ಬರೇ ಒಂದು ಒರಟು ಕಲ್ಲಿನ ಬಂಡೆ. | |
| | ಎ) ಗೌರಿಕುಂಡಕ್ಕಿರುವ ಇನ್ನೊಂದು ಹೆಸರೇನು ? | |
| | ***ಉತ್ತರ :*** ಗೌರಿಕುಂಡಕ್ಕಿರುವ ಇನ್ನೊಂದು ಹೆಸರು ಗೋಕುಂಡ. | |
| | ಬಿ) ಕೇದಾರ ದೇವಸ್ಥಾನದ ಒಳಗಡೆ ಪಾಂಡವರ ವಿಗ್ರಹಗಳನ್ನು ಅಳವಡಿಸಲು ಕಾರಣವೇನು ? | |
| | ***ಉತ್ತರ :*** ಪಾಂಡವರು ಇಲ್ಲಿ ತಪಸ್ಸು ಮಾಡಿ ಈ ದೇವಸ್ಥಾನಗಳನ್ನು ಕಟ್ಟಿದ್ದರಿಂದ ಕೇದಾರ ದೇವಸ್ಥಾನದ ಒಳಗಡೆ ಪಾಂಡವರ ವಿಗ್ರಹಗಳನ್ನು ಅಳವಡಿಸಿದ್ದಾರೆ. | |
| | ಸಿ) ಸೋನ ಪ್ರಯಾಗ ಎಂಬ ಊರು ಎಲ್ಲಿದೆ ? | |
| | ***ಉತ್ತರ :*** ಮಂದಾಕಿನೀ ಮತ್ತು ಸೋನಗಂಗಾ ಎಂಬ ನದಿಗಳ ಸಂಗಮದಲ್ಲಿ ಸೋನ ಪ್ರಯಾಗ ಎಂಬ ಪುಟ್ಟ ಊರು ಇದೆ. | |
| | ಡಿ) ಕೇದಾರ ಪರ್ವತದ ತಪ್ಪಲಿನ ವಿಶೇಷತೆ ಏನು ? | |
| | ***ಉತ್ತರ :*** ಕೇದಾರ ಪರ್ವತದ ತಪ್ಪಲಿನ 'ಗೋಮುಖ' ದಿಂದ ಸತತವಾಗಿ ಹಬೆಯಾಡುವ ಬಿಸಿನೀರು ಹರಿದು ಬಂದು ಕುಂಡದಲ್ಲಿ ಬೀಳುವುದು ಇಲ್ಲಿಯ ವಿಶೇಷತೆಯಾಗಿದೆ. | |
| **XII.** | **ಪ್ರಬಂಧ ಬರವಣಿಗೆ :** | **1 × 4 = 4** |
| 37. | ಗಣಕಯಂತ್ರ<br>**ಅಥವಾ**<br>ಶಾಲೆಗಳಲ್ಲಿ ಕ್ಷೀರಭಾಗ್ಯ ಯೋಜನೆಯ ಮಹತ್ವ | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XIII. | **ಪತ್ರ ಲೇಖನ ಬರೆಯುವುದು :** | **1 × 5 = 5** |
| 38. | ನಿಮ್ಮನ್ನು ಬೆಂಗಳೂರಿನ ನಿವಾಸಿ 'ಸ್ವರಾ' ಎಂದು ಭಾವಿಸಿಕೊಂಡು, ಮೈಸೂರಿನಲ್ಲಿರುವ ಚಿಕ್ಕಮ್ಮನವರಿಗೆ ನಿಮ್ಮ ಹುಟ್ಟುಹಬ್ಬಕ್ಕೆ ಆಹ್ವಾನಿಸಿ, ಒಂದು ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಧಾರವಾಡದ ನಿವಾಸಿ 'ಪರಮೇಶ್ವರ' ಎಂದು ಭಾವಿಸಿಕೊಂಡು, ನಿಮ್ಮ ಊರಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ವ್ಯವಸ್ಥೆ ಮಾಡುವ ಕುರಿತು ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ. | |
| | *ವೈಯಕ್ತಿಕ ಪತ್ರ :* | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |